ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಚಿಕ್ಕಮಗಳೂರು
ಸಿ.ಸಿ.ನಂ. 44 : 2018

| | | | |
|---|---|---|---|
| ಸಾಕ್ಷಿದಾರರ ಹೆಸರು | : ಹೆಚ್ ಡಿ ಕುಲಕರ್ಣಿ | | ಪಿ.ಡಬ್ಲ್ಯೂ: 13 |
| ತಂದೆಯ ಹೆಸರು | : ಹೆಚ್ ಪಿ ದೇವಯ್ಯ | | ಸಿ.ಡಬ್ಲ್ಯೂ: 28 |
| ವಯಸ್ಸು | : 48 ವರ್ಷ | | |
| ವೃತ್ತಿ | : ಪೋಲಿಸ್ ಇನ್ಸಪೆಕ್ಟರ್, ವಿಕಾಸ ಸೌಧ | | |
| ವಾಸ | : ಬೆಂಗಳೂರು | | |

ದಿನಾಂಕ: 15-04-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಹಿರಿಯ ಎಪಿಪಿ ರವರಿಂದ:-

ನಾನು ದಿ: 26.10.2003 ರಿಂದ 17.05.2006 ರವರೆಗೆ ಚಿಕ್ಕಮಗಳೂರಿನ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿದ್ದೇನೆ.

ಬಾಬಾ ಬುಡನ್ ಗಿರಿಯಲ್ಲಿರುವ ಪೋಲಿಸ್ ಹೊರ ಠಾಣೆಯು ಚಿಕ್ಕಮಗಳೂರು ಗ್ರಾಮಾಂತರ ಪೋಲಿಸ್ ಠಾಣೆ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಕರ್ತವ್ಯದಲ್ಲಿದ್ದ ಸಿಂಗಟಗೆರೆ ಪೋಲಿಸ್ ಠಾಣೆಯ ರುದ್ರಪ್ಪ ಎಎಸ್ಐ ಅವರು ದಿ: 13.05.2006 ರಂದು ಹೊರ ಠಾಣೆಗೆ ಒಂದು ಪತ್ರ ಬಂದಿರುವ ಬಗ್ಗೆ ಅದನ್ನು ತಂದು ನನ್ನ ಮುಂದೆ ಹಾಜರುಪಡಿಸಿದರು. ಅದನ್ನು ಪರಿಶೀಲಿಸಲಾಗಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್ ಪವನ್ ಕುಮಾರ್ ಚಿಕ್ಕಮಗಳೂರು ಬೀ ರೆಡಿ ಟು ಫೈಟ್ ಫಾರ್ ಯುವರ್ ಪೋಜಿಷನ್ ಫ್ರಮ್ ಸ್ಪೆಷಲ್ ಸ್ಕ್ವಾಡ್ ಅಂತ ಇಂಗ್ಲೀಷ್ ನಲ್ಲಿ ಬರೆದಿರುವುದು ಕಂಡು ಬಂತು. ಸದರಿ ಕವರಿನ ಒಳಗಡೆ ಇಂಗ್ಲಿಷ್ ನಲ್ಲಿ ಬರೆದಿರುವ ಒಂದು ಪತ್ರ ಇದ್ದು ಅದರಲ್ಲಿ ಬಾಬಾ ಬುಡನ್ ಗಿರಿಯಲ್ಲಿ ಭದ್ರತಾ ವ್ಯವಸ್ಥೆ ಸರಿಯಾಗಿಲ್ಲ ಅಂತ ಬರೆದಿತ್ತು. ಸದರಿ ಪತ್ರವನ್ನು ಅದೇ ದಿನ ಅಂದರೆ ದಿ: 13.05.2006 ರಂದು ಮಾನ್ಯ ಹೆಚ್ಚುವರಿ ಪೋಲಿಸ್ ಅಧೀಕ್ಷಕರು, ಚಿಕ್ಕಮಗಳೂರು ಜಿಲ್ಲೆ ಇವರನ್ನು ಖುದ್ದಾಗಿ ಭೇಟಿ ಮಾಡಿ ನೀಡಿರುತ್ತೇನೆ. ನಂತರ ದಿ: 17.05.2006 ರಂದು ಈ ಪತ್ರ ಬರೆದ ಶ್ರೀಮತಿ ದೀಪಾ ಅಲಿಯಾಸ್ ತಬಸುಮ್ ಶರೀಫ್ ಎನ್ನುವವರನ್ನು ಚಿಕ್ಕಮಗಳೂರು ನಗರ ಪೋಲಿಸ್ ಠಾಣೆ ಮೊಕದ್ದಮೆ ಸಂ 222:2006 ರಲ್ಲಿ ಬಂಧಿಸಿರುವ ಬಗ್ಗೆ ನನಗೆ ಮಾಹಿತಿ ಬಂದಿತ್ತು. ಈ ಪ್ರಕರಣದಲ್ಲಿ ನಾನು ದಿ: 19.05.2006 ರಂದು ಪ್ರಕರಣದ ತನಿಖಾಧಿಕಾರಿ ಪೋಲಿಸ್ ಇನ್ಸಪೆಕ್ಟರ್ ಅನಿಲ್ ಕುಮಾರ್ ಅವರ ಮುಂದೆ ಅಂದರೆ ಚಾಸಾ-30 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ      ಆರೋಪಿ ನಾಪತ್ತೆಯಾಗಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ. ಚಿಕ್ಕಮಗಳೂರು.